**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 18.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ಇ ಎಸ್ ಐ ಕಾರ್ಪೊರೇಶನ್ ರವರು ನೀಡಿದ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.5 ಎಂದು, ಕೆನರಾ ಬ್ಯಾಂಕ್ ರವರು ದೃಢೀಕರಿಸಿರುವ ಪೆನ್ಷನ್ ವಿವರದ ದಾಖಲೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.6 ಎಂದು, ವೃದ್ಯಾಪ್ಯ ವೇತನ ಯೋಜನೆ ಅಡಿಯಲ್ಲಿ ನೀಡಿದ ಗುರುತಿನ ಚೀಟಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.7 ಎಂದು, ತಹಶೀಲ್ದಾರ್ ಹುಬ್ಬಳ್ಳಿರವರು ದಿಃ19/07/2008 ರಂದು ಮಾಡಿದ ಒಂದು ಆದೇಶವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.8 ಎಂದು, ಶಿವಮೂರ್ತಯ್ಯ ಸಾಲಿಮಠ ಇವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.9 ಎಂದು, ಭಾರತ ಗ್ಯಾಸ್ ಇವರು ನೀಡಿದ ಒಂದು ರಶೀದಿಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದು ಆಕ್ಷೇಪಣೆಗೊಳಪಟ್ಟು ಸದರಿ ದಾಖಲೆಯನ್ನು ನಿಪಿ.10 ಎಂದು, ಗಣತಿಯ ದಾಖಲೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.11 ಎಂದು, ನಾನು ಜನನ ಮರಣ ನೊಂದಣಾಧಿಕಾರಿಯವರಿಗೆ ಶಿವಮೂರ್ತಯ್ಯ ಸಾಲಿಮಠ ಇವರ ಮರಣ ನೊಂದಣಿ ದಾಖಲೆಯನ್ನು ರದ್ದುಪಡಿಸುವಂತೆ ಅರ್ಜಿ ನೀಡಿದ್ದು ಅದರ ಪ್ರತಿಯನ್ನು ಹಾಜರಪಿಡಿಸಿದ್ದು ಸದರಿ ದಾಖಲೆಯನ್ನು ನಿಪಿ.12 ಎಂದು, ಸರ್ವೆ ನಂ.60 ರ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.13 ಎಂದು, ಮೂರು ಮ್ಯೂಟೇಶನ್ ಎಕ್ಸಟ್ರ್ಯಾಕ್ಟನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ನಿಪಿ. 14 ರಿಂದ 16 ಎಂದು, ಆದಾಯ ವ ಜಾತಿ ಪ್ರಮಾಣಪತ್ರವನ್ನು

ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.17 ಎಂದು, ದೇಸಾಯಿ ಆ್ಯಂಡ್ ಕಂಪನಿರವರು ನೀಡಿದ ನಾಲ್ಕು ರಶೀದಿಗಳನ್ನು ಹಾಜರುಪಡಿಸಿದ್ದು ಸದರಿ ದಾಖಲೆಗಳನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದು ಅಕ್ಷೇಪಣೆಗೊಳಪಟ್ಟು ಸದರಿ ದಾಖಲೆಗಳನ್ನು ನಿಪಿ.18 ರಿಂದ 21 ಎಂದು, ಭಾರತ ಪೆಟ್ರೋಲಿಯಂ ಕಾರ್ಪೊರೇಶನ್ ಲಿಮಿಟೆಡ್ ಇವರು ನೀಡಿದ ಒಂದು ಓಚರ್ನ್ನು ಹಾಜರಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.22 ಎಂದು, ಪ್ರೋವಿಡೆಂಟ್ ಫಂಡ್ ಕಮಿಷನರ್ ರವರು ದಿಃ15/03/2001 ರಂದು ನೀಡಿದ ದಾಖಲೆಯನ್ನು ನಿಪಿ.23 ಎಂದು, ಪಂಚಯಾದಸ್ತನ ದೃಢಿಕೃತ ಪ್ರತಿಯನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಆಕ್ಷೇಪಣೆ ಸಲ್ಲಿಸಿದ್ದು ಅಕ್ಷೇಪಣೆಗೊಳಪಟ್ಟು ಸದರಿ ದಾಖಲೆಯನ್ನು ನಿಪಿ.24 ಎಂದು, ಒಂದು ಆದಾಯ ದೃಢೀಕರಣ ಪತ್ರವನ್ನು ಹಾಜರಪಡಿಸಿದ್ದು ಸದರಿ ದಾಖಲೆಯನ್ನು ನಿಪಿ.25 ಎಂದು ಗುರುತಿಸಲಾಯಿತು.

**(ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು).**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**